MYSORE WAREHOUSES (AMENDMENT) BILL, 1965.

Introduction.

Sri K. PUTTASWAMY (Minister for Co-operation and Housing).—Sir, I beg to introduce the Mysore Warehouses (Amendment) Bill, 1965.

Mr. SPEAKER.—The Bill is introduced.

MYSORE EXCISE BILL, 1964, AS REPORTED BY THE JOINT SELECT COMMITTEE.

Motion to consider.

Sri RAMAKRISHNA HEGDE (Minister for Finance).—I beg to move :

"That the Mysore Excise Bill, 1964, as reported by the Joint Select Committee, be taken into consideration."

Mr. SPEAKER.—Motion moved :

"That the Mysore Excise Bill, 1964, as reported by the Joint Select Committee, be taken into consideration."

† Sri RAMAKRISHNA HEGDE.—Sir, as Hon'ble Members are aware, this Bill was placed before this Hon'ble House.....

ಶ್ರೀ ಎಸ್. ಗೋಪಾಲಗೌಡ.—ಎಕ್ಸ್‌ಟ್ರಾಜ್ ಪೋರ್ಟ್‌ಫೋಲಿಯೋ ಮಂತ್ರಿಗಳು ಯಾರು ಎನ್ನುವುದು ನಮಗೆ ಈಗ ಗೊತ್ತಾಗುತ್ತಿಲ್ಲ. ನಾವು ಇಲ್ಲಿಗೆ ಬಂದು ಸುಮಾರು ಆರು ತಿಂಗಳ ಮೇಲಾಯಿತು.

Mr. SPEAKER.—The Hon'ble Member must daily read the Gazette. If he forgets the next day what he read the previous day, he must re-read it. Change of portfolios was announced in the Gazette.

4-00 P.M.

ಶ್ರೀ ಎಸ್. ಗೋಪಾಲ ಗೌಡ.—ಕ್ಯಾಬಿನೆಟ್ಟಿನಲ್ಲಿ ಏನೋ ಮಹತ್ತರವಾದ ಬದಲಾವಣೆ ಗಳಾದಂತಿವೆ. ಇದರ ವಿವರಗಳೇನು ಎಂದು ಕೇಳಬಯಸುತ್ತೇನೆ.

Mr. SPEAKER.—The Hon'ble Member must not make me a reminder to him.

Sri RAMAKRISHNA HEGDE.—As I was submitting, this Bill was placed for consideration of this House. This Bill was brought forward with a view to bring about uniformity in the various excise laws that existed before reorganisation. The Joint Select Committee has given a unanimous report and I commend it for the acceptance of the House.

ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮೀ, ಈ ಎಕ್ಸೈಜು ಬಿಲ್ಲನ್ನು ಏತಕ್ಕಾಗಿ ಇಲ್ಲಿ ತಂದರು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅದರಲ್ಲೂ ಸರಕಾರದವರು ಎಕ್ಸೈಜು ವಿಷಯದಲ್ಲಿ ಮಾಡಿರತಕ್ಕ ಕಾನೂನು ಹಾಗೂ ಈ ಕಾನೂನು ಸೆಲೆಕ್ಟ್ ಕಮಿಟಿಯೊಳಗೆ ಹೋಗಿ ಬಂದಿದ್ದರೂ ಕೂಡ ಜನತೆಗೆ ಉಪಯೋಗವಾಗುವ ಹಾಗೆ ಬರಲಿಲ್ಲವಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಇದನ್ನು ಹೀಗೆ ತರದೇ ಪಾಪಸ್ಸು ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಇಂತಹ ಕಾನೂನಿನಿಂದ ಸರಕಾರದ ಗೌರವವನ್ನು ಕಾಪಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ.

Mr. SPEAKER.—After reference to the Joint Select Committee, after the deliberations of the Committee and after the Report of the Committee is placed before the House there is no scope for this argument. You can say let the Report be rejected. I have no objection to it, but do not drag in the prohibition policy. If you want you can bring a separate resolution for that.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಇಂತಹ ಎಕ್ಸೈಜು ಬಿಲ್ಲಿನ ವಿಷಯದಲ್ಲಿ ಹೇಳಬೇಕಾದರೆ ಈ ದೇಶದಲ್ಲಿ ಕಾನೂನನ್ನು ಪಾಲನೆತಕ್ಕ ಜನಗಳೇ ಇಲ್ಲ ಎಂದು ಹೇಳಬೇಕಾಗಿದೆ. ಎಕ್ಸೈಜು ಕಾನೂನು ಎಂದು ಕೇವಲ ಕಾನೂನುಗಳ ಕಡತದಲ್ಲಿ ಇಡಲು ಉಳಿದಿದೆಯೇ ಹೊರತು ದೇಶದಲ್ಲಿ ಜನತೆಗೆ ಅನುಕೂಲವಾಗುತ್ತಿಲ್ಲ. ಆದರೆ ಈ ಕಾನೂನಿನಿಂದ ಪೋಲೀಸಿನವರಿಗೆ ಬಹಳ ಅನುಕೂಲಗಳಾಗಿವೆ. ಇಪ್ಪೊತ್ತು ಧನಿಕರಿಂದ ಹಿಡಿದು ಬಡವರವರೆಗೆ ಯಾರಿಗೂ ಈ ಕಾನೂನಿನಿಂದ ಅನುಕೂಲವಾಗುತ್ತಿಲ್ಲ. ಎಲ್ಲೋ ಕೆಲವರಿಗೆ ಈ ಕಾನೂನಿನಿಂದ ಅನುಕೂಲವಾಗಿದೆ. ಇಂತಹ ಸಂದರ್ಭದಲ್ಲಿ ಈ ಕಾನೂನನ್ನು ಏಕೆ ತಂದರು ಎನ್ನುವುದೇ ನನಗೆ ಸಂದೇಹಾಸ್ಪದವಾಗಿದೆ. ಈಗ ಸರಕಾರದ ಮುಂದೆ ತೇಕ್ ಚಂದ್ ಕಮಿಟಿ ವರದಿ ಏನ್ನುವುದು ಬಂದಿದೆ. ಅದನ್ನು ಕೂಲಂಕಷವಾಗಿ ವಿಮರ್ಶಿಸಿ ಅದಕ್ಕೆ ಹೊಂದುವ ರೀತಿಯಲ್ಲಿ ಸೆಲೆಕ್ಟ್ ಕಮಿಟಿಯೊಳಗಾದರೂ ಈ ಕಾನೂನನ್ನು ಬದಲಾವಣೆ ಮಾಡಿ ತರಲು ಸಾಧ್ಯವಾದರೆ ಇನ್ನೊಂದು ಸಾರಿ ಮೀಟಿಂಗನ್ನು ಕರೆದು ಈ ಕಾನೂನನ್ನು ತಂದಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ಅಲ್ಲದೆ ಈಗ ತಂದಿರುವ ಈ ಬಿಲ್ಲನ್ನು ಮೊದಲಿನಿಂದ ಕೊನೆಯವರೆಗೆ ನೋಡಿದರೂ ಇದರಲ್ಲಿ ಕೇವಲ ಕೆಲವು ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಅನುಕೂಲವಾಗಿದೆ. ಇದರಲ್ಲಿ ಡೆಪ್ಯುಟಿ ಕಮಿಷನರುಗಳು, ಡಿಸ್ಟ್ರಿಕ್ಟ್ ಎಕ್ಸೈಜು ಆಫೀಸರುಗಳು ಅಸಿಸ್ಟೆಂಟ್ ಎಕ್ಸೈಜು ಆಫೀಸರುಗಳು ಎಂದು ಹೀಗೆ ಅಧಿಕಾರಿಗಳನ್ನು ಹೆಚ್ಚು ಹೆಚ್ಚಾಗಿ ನೇಮಕ ಮಾಡಿಕೊಂಡರೆ ಇದರಿಂದ ಏನು ಉದ್ದೇಶ ಸಾಧಿಸಿದಂತಾಗುತ್ತದೆ? ಅಧರಿಂದಾಗಿ ಈ ದೇಶದಲ್ಲಿ ಪ್ರೊಹಿಬಿಷನ್ ಸಕ್ಸೆಸ್‌ಫುಲ್ ಆಗಿಲ್ಲ ಮತ್ತು ಇದರಿಂದ ದೇಶದ ಜನಗಳಿಗೆ ಅನಾಹುತವಾಗುತ್ತದೆ. ಇಂತಹ ಕಾನೂನನ್ನು ಖಂಡಿತ ತರುವುದು ಸರಿಯಲ್ಲ. ಈ ಕಾನೂನಿನಲ್ಲಿರುವಂತೆ ಕೆಲ ಕೆಳದರ್ಜೆ ಅಧಿಕಾರಿಗಳಿಗೆ ಅಧಿಕಾರಗಳನ್ನು ಕೊಟ್ಟುಬಿಟ್ಟು ಕಾನೂನು ಮಾಡಿದರೆ ಅದರಿಂದ ಅಧಿಕಾರಗಳನ್ನು ದುರುಪಯೋಗ ಮಾಡಿಕೊಳ್ಳಲು ಅವಕಾಶವನ್ನು ಕಲ್ಪನೆ ಮಾಡಿಕೊಟ್ಟ ಹಾಗಾಗುತ್ತದೆ. ಎಕ್ಸೈಜು ಇಲಾಖೆಯಲ್ಲಿ ಎಕ್ಸೈಜು ಇನ್‌ಸ್ಪೆಕ್ಟರುಗಳಿಂದ ಹಿಡಿದು ಎಕ್ಸೈಜು ಕಮಿಷನರ್‌ರವರೆಗೂ ತಾವು ಕೊಟ್ಟಿರತಕ್ಕಂತಹ ಅಧಿಕಾರಗಳು ಬಹಳ ಜಾಸ್ತಿಯಾಗಿವೆ. ಇದರಿಂದಾಗಿ ಕೆಳದರ್ಜೆಯ ಅಧಿಕಾರಿಗಳು ಅಧಿಕಾರಗಳನ್ನು ದುರುಪಯೋಗ ಮಾಡಲು ಅವಕಾಶ ಮಾಡಿಕೊಟ್ಟಂತಾಗಿದೆ. ಇದರಿಂದ ಸಾಮಾನ್ಯ ಜನತೆಗೆ ಬಹಳ ತೊಂದರೆಯಾಗುತ್ತದೆ. ಈ ಎಕ್ಸೈಜ್ ಬಿಲ್ಲಿನಿಂದ ಈ ದೇಶದಲ್ಲಿ ಈಗ ಕಳ್ಳಬಟ್ಟಿ ಸಾರಾಯಿ ತಯಾರು ಮಾಡುತ್ತಿರುವವರನ್ನು ಹಿಡಿದು ತೆಪ್ಪಿಸಲು ಯಾವ ಅವಕಾಶಗಳೂ ಇಲ್ಲ. ಏಕೆಂದರೆ ಕಳ್ಳಬಟ್ಟಿ ತಯಾರು ಮಾಡುವವರೆಲ್ಲಾ ಪೋಲೀಸು ಇಲಾಖೆಯವರ ಆಶ್ರಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಯಾರೂ ಕೇಳುವವರೂ ಇಲ್ಲ ಹೇಳುವವರೂ ಇಲ್ಲ. ಕಾನೂನು ಪ್ರಕಾರ ಇದರಲ್ಲಿ 'ಪರ್ ರಿಪೋರ್ಟ್' ಎಂದು ಮಾಡಬೇಕು. ಆದರೆ ಹಾಗೆ ಯಾರೂ ಈಗ ಮಾಡುತ್ತಿಲ್ಲ. ಪೋಲೀಸಿನವರೇ ಎಷ್ಟೋ ಕಡೆಗಳಲ್ಲಿ ಕಳ್ಳಬಟ್ಟಿ ಮಾಡುವವರಲ್ಲಿ ಷರೀಕು ಆಗಿ ಕೆಲಸ ಮಾಡುತ್ತಿದ್ದಾರೆ. ಇದರಿಂದಾಗಿ ಪ್ರೊಹಿಬಿಷನ್ನು ನೀತಿ ಈ ದೇಶದಲ್ಲಿ ಸರಿಯಾಗಿ ಫಲಕಾರಿಯಾಗಿಲ್ಲ. ಪೋಲೀಸಿನವರೇ ಇದರೊಳಗಡೆ ನೇರಕೊಂಡಿರುವುದರಿಂದ ದೇಶದ ಬಡ ಜನತೆಗೆ ತುಂಬಾ ಅನ್ಯಾಯವಾಗುತ್ತದೆ. ಇದನ್ನು ಸರಕಾರದ ಗಮನಕ್ಕೆ ತಂದರೂ ಸರಕಾರ ಇದರಕಡೆಗೆ ಸರಿಯಾಗಿ ಗಮನ ಕೊಡುತ್ತಿಲ್ಲ. ಇದಕ್ಕೆ ಕಾರಣವೇನು ಎನ್ನುವುದನ್ನು ಸರಕಾರದವರು ಸರಿಯಾಗಿ ಯೋಚನೆ ಮಾಡಿಲ್ಲ. ಮೂಲ ಭೂತವಾಗಿ ಇದಕ್ಕೆ ಪೋಲೀಸು ಇಲಾಖೆಯೇ ಕಾರಣ ಎಂದು ಧಾರಾಳವಾಗಿ ಹೇಳಬಹುದು. ಅದುದರಿಂದ ಸರಕಾರ ಈಗಲಾದರೂ ಇದನ್ನು ತಡೆಗಟ್ಟಲಿಕ್ಕೆ ಆಲೋಚನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈ ಬಿಲ್ಲಿಗೆ ಬಂದರೆ ಇದು ಯೂನಿಫಾರಂ ಲಾ ಅಲ್ಲ. ಇದರಲ್ಲಿರುವ ಕ್ಲಾಜು (1) ರಲ್ಲಿ

"(4) All the provisions of this Act shall be applicable to the areas of the State in which the Mysore Prohibition Act, 1961, Mysore Act 17 of 1962 is not in operation and shall apply to such extent as is specified in the said Act in the areas in which the said Act is in opperation."

(ಶ್ರೀ ಎಚ್. ಆರ್. ಕೇಶವಮೂರ್ತಿ)

ಎಂದಿದೆ. ಇಲ್ಲಿ ಯೂನಿಫಾರಂ ಆದ ಕಾನೂನನ್ನು ಏತಕ್ಕಾಗಿ ತರಲಿಕ್ಕೆ ಆಗಲಿಲ್ಲ ಎಂದು ನಾನು ಕೇಳಬೇಕಾಗಿದೆ. ಮೊದಲಿನಿಂದಲೂ ನಾವು ಪ್ರೊಗ್ರೆಷಿವಿಟಿಯನ್ನು ಸ್ಯಾಕ್ರಿಫೈಸ್ ಮಾಡಬೇಕೆಂದು ಹೇಳುತ್ತಲೇ ಬರುತ್ತಿದ್ದರೂ ಸರಕಾರ ಸೇಲ್ಸ್ ಟ್ಯಾಕ್ಸನ್ನು ಹೆಚ್ಚು ಮಾಡಬೇಕೆಂದು ಹೇಳಿ ನುಮಾರು 18 ಕೋಟಿ ರೂಪಾಯಿಗಳಷ್ಟು ಉತ್ಪತ್ತಿ ಬರುತ್ತದೆ ಎಂದು ಸೇಲ್ಸ್ ಟ್ಯಾಕ್ಸ್ ಹಾಕಿದರು. ಇವೆಲ್ಲ ಬಡ ಜನತೆಯ ಮೇಲೆಯೇ ಹೆಚ್ಚಾಗಿ ಬೀಳುತ್ತಿದೆ. ಅದರಿಂದಾಗಿ ಇವೊತ್ತು ಆಹಾರ ದಿನಸಿಗಳ ಬೆಲೆಗಳು ಗಗನಕ್ಕೇರುತ್ತಿದೆ. ಸೇಲ್ಸ್ ಟ್ಯಾಕ್ಸುಗಳ ಹೊರೆ ಸಾಮಾನ್ಯ ಜನತೆಯ ಮೇಲೆಯೇ ಬೀಳುತ್ತದೆ. ಅದರಿಂದಾಗಿ ಆಹಾರ ದಿನಸಿಗಳ ಬೆಲೆಗಳು ಗಗನಕ್ಕೇರುತ್ತಿವೆ. ಸರಕಾರದವರು ಈ ಬೆಲೆಗಳನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇಧರಿಂದ ರಾಜ್ಯದ ಬಡಜನತೆಗೆ ತುಂಬಾ ತೊಂದರೆಯಾಗುತ್ತಿದೆ. ಇಂತಹ ಕಾನೂನುಗಳನ್ನು ಈಗಿನ ಸರಕಾರ ತರುತ್ತಿದ್ದರೆ ಮುಂದೆ ಒಳ್ಳೆಯ ಕಾಲ ಬಂದು, ಬೇರೆ ಪಕ್ಷದವರು ಸರಕಾರದ ಆಡಳಿತ ಮಾಡಲು ಬಂದಾಗ ಜನತೆ ನಿಮ್ಮನ್ನು ಚ್ರೇಟರ್ಸ್ ಎಂದು ಹೇಳಲು ಅವಕಾಶವಾಗುತ್ತದೆ. ಅಂತಹ ಅವಕಾಶಗಳನ್ನು ಮಾಡಲು ಹೋಗಬೇಡಿ ಎಂದು ಇಲ್ಲಿ ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆ.

18 ಕೋಟಿ ಆದಾಯವನ್ನು ತಪ್ಪಿಸಿಕೊಂಡು ಸರ್ಕಾರದವರು ಈ ಪಾನ ನಿರೋಧ ಕಾನೂನನ್ನು ಜಾರಿಗೆ ತಂದರೆ ಏನು ಪ್ರಯೋಜನ? ನಾವು ಮೊದಲಿಂದಲೂ ದೇಶದಲ್ಲಿ ಒಂದು ಯೂನಿಫಾರಂ ಲಾ ತನ್ನಿ ಎಂದು ಹೇಳುತ್ತಿದ್ದಾಗ್ಗೂ ಸರ್ಕಾರದವರು ಅದನ್ನು ಮಾಡುವುದಕ್ಕೆ ಸಿದ್ಧವಾಗಿಲ್ಲ. ಬೆಂಗಳೂರಿನಲ್ಲಿರತಕ್ಕವರು ಕುಡಿದರೆ ಅಪರಾಧವಲ್ಲ, ಹಳ್ಳಿಯಲ್ಲಿರತಕ್ಕವರು ಕುಡಿದರೆ ಅದು ಅಪರಾಧವಾಗುತ್ತದೆ, ಒಂದು ಸರಹದ್ದಿನ ಇತ್ತ ಕಡೆಯವರು ಕುಡಿದರೆ ಅಪರಾಧವಲ್ಲ, ಅತ್ತ ಕಡೆಯವರು ಕುಡಿದರೆ ಅಪರಾಧ, ದೊಡ್ಡವರು ಕುಡಿದರೆ ಅಪರಾಧವಲ್ಲ, ಬಡವರು ಕುಡಿದರೆ ಅಪರಾಧ ಎಂದು ಹೇಳತಕ್ಕ ಶಾಸನ ಎಷ್ಟು ನ್ಯಾಯಬದ್ಧವಾಗಿದೆ ಎಂಬುದನ್ನು ತಾವೇ ಹೇಳಿ.

ಇನ್ನು ಈ ಇಲಾಖೆಗೆ ಹೆಚ್ಚು ಜನ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಇದು ತಪ್ಪು. ದೇಶದಲ್ಲಿ ಆದಷ್ಟೂ ಕಾನೂನುಗಳೂ ಮತ್ತು ಅಧಿಕಾರಿಗಳ ಸಂಖ್ಯೆ ಕಡಮೆ ಇರಬೇಕು. ಕಾನೂನುಗಳ ಸಂಖ್ಯೆ ಜಾಸ್ತಿಯಾದರೆ ಅವುಗಳನ್ನು ಪಾಲಿಸಲು ಜನರಿಗೆ ಜಿಗುಸ್ಟೆಯಾಗುವುದು. ಕಾನೂನು ಪಾಲನೆಯಲ್ಲಿ ಬಿಗಿ ತಪ್ಪುವುದು. ಆದುದರಿಂದ ಆಡಳಿತ ಬಿಗಿಯಾಗಿರಬೇಕಾಗಿದ್ದರೆ ಕಾನೂನುಗಳ ಸಂಖ್ಯೆ ಕಡಮೆಯಾಗಿರಬೇಕು. ಇದನ್ನು ಆಡಳಿತ ವರ್ಗದವರು ಅರಿಯುವುದು ಒಳ್ಳೆಯದು.

ಇನ್ನು ಇಲ್ಲಿ ಕೆಲವು ಕ್ಲಾಜುಗಳನ್ನು ಕೊಡಲಾಗಿದೆ, ಅವುಗಳನ್ನು ಒಂದು ಕೋಡಲ್ ಲಾಂಗ್ವೇಜಿನಲ್ಲಿ ಬರೆದಿದ್ದಾರೆ. ಬಹಳ ಬಿಕ್ಕಾಟ್ಟಾಗೂ ಬರೆಯಂಗಾಗಿದೆ. ಆದರೆ ಅವುಗಳ ಬಗ್ಗೆ ಸಧ್ಯಕ್ಕೆ ನಾನೂ ಏನನ್ನೂ ಹೇಳಲಾರೆ. ಒಟ್ಟಿನಲ್ಲಿ ಇದೊಂದು ಜನರಿಗೆ ತೊಂದರೆಯನ್ನು ಕೊಡತಕ್ಕ ಕಾನೂನು ಎಂದು ಹೇಳಬಹುದು. ಆದರೆ ಈಗ ಈ ಬಿಲ್ಲಿನಲ್ಲಿ ಏನು ಎಕ್ಸ್‌ಪೋರ್ಟ್, ಇಂಪೋರ್ಟ್, ಟ್ರಾನ್ಸ್‌ಪೋರ್ಟ್ ವಿಚಾರವನ್ನು ಹೇಳಿದ್ದಾರೋ ಅವುಗಳ ಮೂರೆಯಲ್ಲೇ ಅನೇಕ ವಿಚಾರಗಳು ನಡೆಯುತ್ತವೆ. ಯಾವುದೂ ನಿಂತಿಲ್ಲ, ನಿಲ್ಲುವುದೂ ಇಲ್ಲ.....

Mr. SPEAKER.—It is only to bring about uniformity while there is disparity between area and area!

ಶ್ರೀ ಎಚ್. ಆರ್. ಕೇಶವಮೂರ್ತಿ.—ಒಂದು ಪ್ರದೇಶದಲ್ಲಿ ಕುಡಿದರೆ ಅಪರಾಧ, ಮತ್ತೊಂದು ಕಡೆ ಕುಡಿದರೆ ಅಪರಾಧವಲ್ಲ ಎಂದರೆ ಇದು ಎಂಥಾ ಕಾನೂನು? ಸ್ವಾಮಿ, ಬೆಂಗಳೂರಿನಲ್ಲಿ ಹೆಂಡ, ಸಾರಾಯಿ ಕುಡಿದರೆ ಅಪರಾಧವಿಲ್ಲ, ಹಳ್ಳಿಯಲ್ಲಿ ಕುಡಿದರೆ ಅಪರಾಧವಾಗುತ್ತೆಂದರೆ.....

Mr. SPEAKER.—You should have opposed the Bill itself; it should not have been referred to the Select Committee!

ಶ್ರೀ ಎಚ್. ಆರ್. ಕೇಶವಮೂರ್ತಿ.—ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಹಾಗೆ ಮಾಡಬಾರದಾಗಿತ್ತು. ಅವರು ಏನೋ ಒಂದು ಪ್ರೆಷರ್‌ಗೆ ಸಿಕ್ಕಿ ಹಾಗೆ ಮಾಡಿದ್ದಾರೆ.....

Mr. SPEAKER.—If he is committing contempt by saying that Committee was pressurised: I cannot allow that.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇನ್ನು ಪೆನಾಲ್ಟಿ ಕ್ಲಾಜಿನಲ್ಲಿ ಲೈಸೆನ್ಸ್ ಮತ್ತು ಪರ್ಮಿಟ್ಟುಗಳನ್ನು ಕೊಡತಕ್ಕ ವಿಚಾರದಲ್ಲಿ ಕೆಲವು ವಿವರಗಳನ್ನು ಹೇಳಿದ್ದಾರೆ. ಆದರೆ ಈ ವಿಚಾರವನ್ನು ಸ್ವಲ್ಪ ಪರಿಶೀಲನೆಮಾಡಿ ಹಾಕಬೇಕಾಗಿತ್ತು. ಉದಾಹರಣೆಯಾಗಿ ಹೇಳುವುದಾದರೆ—ಕೆಲವು

ಅಪರಾಧಗಳ ಹಾಗೂ ಜುರ್ಮಾನೆಗಳ ವಿಚಾರದಲ್ಲಿ 6 ತಿಂಗಳ ನಜಾ ಮತ್ತು ಒಂದು ಸಾವಿರ ರೂಪಾಯಿಗಳ ಜುರ್ಮಾನೆ ಹಾಕಬೇಕೆಂದು ಹೇಳಿದ್ದಾರೆ. ಆದರೆ ಇಲ್ಲಿ ಅಪರಾಧವನ್ನು ತೂಕಮಾಡಿ ಶಿಕ್ಷೆಮಾಡಿದ್ದರೆ ಚೆನ್ನಾಗಿತ್ತು. ಆದರೆ ಹಾಗೆ ಮಾಡದೆ ಎಲ್ಲದಕ್ಕೂ ಒಂದೇ ಮಂತ್ರವನ್ನು ಉಪಯೋಗ ಮಾಡಿರುವುದು ಸರಿಯಲ್ಲ. ಒಟ್ಟಿನಲ್ಲಿ ನಾನು ಹೇಳುವುದಿಷ್ಟೆ. ಬಹಳ ದಿನಗಳಿಂದ ನಾನು ನಿರೀಕ್ಷಿಸಿದ್ದ ಕಾನೂನು ಇದಿಲ್ಲ. ಟೇಕ್‌ಚೆಂದ್ ಸಮಿತಿಯು ವರದಿ ಬರುವತನಕ ಸುಮ್ಮನಿದ್ದು, ಅನಂತರ ಇದನ್ನು ಮಾಡಿದ್ದರೆ ಚೆನ್ನಾಗಿತ್ತೆಂದು ಹೇಳುತ್ತೇನೆ. ಇದನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಅಬ್ಕಾರಿ ಮನೂದೆಯ ಬಗ್ಗೆ ತಯಾರಿಸಲ್ಪಟ್ಟ ಜಂಟಿ ಪರಿಶೀಲನಾ ಸಮಿತಿಯವರ ವರದಿಯನ್ನು ಮಾನ್ಯ ಅಬ್ಕಾರಿ ಸಚಿವರು ಈಗ ಸಭೆಯ ಮುಂದೆ ಮಂಡಿಸಿದ್ದಾರೆ. ಈ ಮನೂದೆ ಹಿಂದೆ ಜಂಟೀ ಸಮಿತಿಯಲ್ಲಿ ಚರ್ಚೆ ಆದ ಕಾಲಕ್ಕೆ ಈ ಕಾಯಿದೆಯ ಮಂತ್ರಿಗಳು ಶ್ರೀ ಎಂ. ಪಿ. ರಾಮರಾಯರಾಗಿದ್ದರು. ಅಂದರೆ ಅವರು ಸಮಿತಿಯ ಅಧ್ಯಕ್ಷರಾಗಿದ್ದರು. ಈಗ ಮಂತ್ರಿ ಮಂಡಲದಲ್ಲಿ ಆಗಿರತಕ್ಕ ಬದಲಾವಣೆಯ ಪ್ರಕಾರ ಶ್ರೀ ಎಂ. ಪಿ. ರಾಮರಾಯರು ಅಧ್ಯಕ್ಷರಾಗಿದ್ದ ಕಡೆಯಲ್ಲಿ ಆ ಬದಲಾವಣೆಯ ಪ್ರಕಾರ ಈಗ ಶ್ರೀ ರಾಮಕೃಷ್ಣ ಹೆಗ್ಗಡೆ ಅವರು ಅಧ್ಯಕ್ಷರಾಗಿದ್ದಾರೆ. ಆದುದರಿಂದ ಈಗ ಅವರು ಈ ಮನೂದೆಯನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಆದರೆ ಅಧ್ಯಕ್ಷರು ಇಲ್ಲಿ ಒಂದು ವಿಷಯವನ್ನು ಗಮನಿಸಿರಬಹುದು. ಈ ಮನೂದೆಯ ಓಡಾಟ ಎಷ್ಟು ದಿವಸಗಳಿಂದ ನಡೆದಿದೆ, ಈ ಸಭೆಯ ಮುಂದೆ ಇದನ್ನು ಎಷ್ಟು ಕಾಲದಿಂದ ಇಡುತ್ತಿದ್ದಾರೆ, ಎಂಬುದನ್ನು ಆಲೋಚನೆ ಮಾಡಿದಲ್ಲಿ ಈ ಮನೂದೆಯನ್ನು ಪ್ರಪ್ರಥಮವಾಗಿ ಈ ಸಭೆಯ ಮುಂದೆ 1962 ನೇ ಡಿಶಂಬರ್‌ನಲ್ಲಿ ಮಂಡಿಸಲಾಯಿತು. 1963 ರಲ್ಲಿ ಇದು ಸೆಲೆಕ್ಟ್ ಸಮಿತಿಯ ಮುಂದೆ ಹೋಯಿತು. ಅದಾದ ನಂತರ ಒಂದು ವರ್ಷ ಕಳೆದ ಮೇಲೆ 1965 ರಲ್ಲಿ ಮತ್ತೆ ಸಭೆಯ ಮುಂದೆ ಬರುತ್ತಿದೆ.

ಇನ್ನು ಈ ಮನೂದೆಯ ಬಗ್ಗೆ ಜಂಟೀ ಪರಿಶೀಲನಾ ಸಮಿತಿಯವರು ಕೊಟ್ಟಿರತಕ್ಕ ವರದಿಯನ್ನು ನಾವು ಪರಿಶೀಲನೆ ಮಾಡಿದಲ್ಲಿ ಅದು ಏನು ತೋರಿಸುತ್ತಿದೆ ಅಂದರೆ :—ಸರ್ಕಾರದವರು ಈ ಮನೂದೆಯನ್ನು ಕಾಯಿದೆಯನ್ನಾಗಿ ಮಾಡತಕ್ಕ ವಿಚಾರದಲ್ಲಿ ಎಷ್ಟು ಪ್ರಯತ್ನಶೀಲರಾಗಿದ್ದಾರೆ, ಅವರಿಗೆಷ್ಟು ಉತ್ಸುಕತೆಯಿದೆ, ಆಸಕ್ತಿಯಿದೆ ಅನ್ನುವುದನ್ನು ಇದು ತೋರಿಸುತ್ತಿದೆ. ಇದರಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ಆದಾಗ್ಯೂ ಅಂಥ ಒಂದು ಹೆಚ್ಚಿನ ಮಾರ್ಪಾಡುಗಳನ್ನೇನೂ ಮಾಡಿದಂತೆ ನನಗೆ ಕಂಡುಬರಲಿಲ್ಲ. ಈಗಲೂ ಸರ್ಕಾರದವರು ಈ ಅಬ್ಕಾರಿ ಬಾಬುಗಳ ಮೇಲೆ ಸುಂಕ ವಿಧಿಸತಕ್ಕ ಬಗ್ಗೆ ತಮ್ಮ ನೀತಿಯನ್ನು ಪುನರ್ವಿಮರ್ಶಿಸುವುದು ಬಹಳ ಅವಶ್ಯಕವೆಂದು ನನಗನ್ನಿಸುತ್ತಿದೆ. ಆದರೆ ಸಾಮಾನ್ಯವಾಗಿ ಈ ಇಲಾಖೆಯ ಹೊಣೆಯನ್ನು ಹೊತ್ತಿರತಕ್ಕ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಅಭಿಪ್ರಾಯ ಏನಿದೆಯೋ ನನಗೆ ಗೊತ್ತಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು ಬಹಳ ವರ್ಷಗಳಾಯಿತು. ಆದಾಗ್ಯೂ ಅಬ್ಕಾರಿ ಎಂಬ ಆ ಓಬಿರಾಯನ ಕಾಲದ ಪದವನ್ನೇ ಈಗಲೂ ಉಪಯೋಗಿಸಲಾಗುತ್ತಿದೆ. ಆದರೆ ಆ ಪದದ ಅರ್ಥವೇನು ಅದು ಹೇಗೆ ಬಂತು ಎಂಬ ಬಗ್ಗೆ ಯಾವ ಡಿಕ್ಷನರಿಯಲ್ಲೂ ಆ ವಿವರಗಳಿದ್ದಂತೆ ನನಗೆ ಕಂಡುಬಂದಿಲ್ಲ. ಅದು ಅಫೀಮು ಗಿಡ ಎಲ್ಲಿಂದ ಬಂತು, ಯಾವುದು ಎಲ್ಲಿಂದ ಬಂತು ಎನ್ನುವಷ್ಟು ಹಳೇ ವಸ್ತು ಮತ್ತು ವಿಷಯ. ಬ್ರಿಟಿಷರ ಕಾಲದಲ್ಲಿ ಒಂದು ಕಾನೂನನ್ನು ಅದಕ್ಕೆ ರಚಿಸಿದ್ದರು ಅದರ ತಿದ್ದುಪಡಿ ಈಗಿನ ಕಾನೂನಿನಲ್ಲಿ, ಪ್ರಯತ್ನ ನಡೆದಿದೆ. ಇದರಲ್ಲಿ ಭಾರಿ ಪ್ರಯತ್ನ ಎಂದರೆ 'ಕಂಟ್ರಿ ಲಿಕ್ಕರ್' ಎಂದು ಅವರು ಕರೆಯುತ್ತಾ ಇದ್ದರು. ಅದನ್ನು ನಮ್ಮವರು 'ಇಂಡಿಯನ್ ಲಿಕ್ಕರ್' ಎಂದು ಮಾಡಬೇಕು ಎಂದು ಹೇಳಿ ಇಲ್ಲಿ ವರದಿ ಮಾಡಿದ್ದಾರೆ. ಒಟ್ಟಿನಲ್ಲಿ ಸಾರಾಂಶ ಅಷ್ಟು. ಈ ಬಾಬಿಗೆ ಕಮೀಷನರು, ಕಂಟ್ರಾಕ್ಟುದಾರರು ಇದ್ದರು, ಬಾಬು ಹರಾಜಾಗುತ್ತಾ ಇತ್ತು, ಹೀಗೇ ಆದು ನಡೆಯಬೇಕೆಂದು ಇತ್ತು, ಅದು ಸರ್ಕಾರದ ಆದಾಯವೂ ಆಗಿತ್ತು ಅದು ಒಂದು ಭಾರಿ ದೊಡ್ಡ ಕಥೆ. ಇದರಲ್ಲಿ ಇವತ್ತು ನಾವೇನು ಮಾಡಿದ್ದೇವೆ? ಮೂಲತಃ ಸ್ವಾಮಿ, ಇಲ್ಲಿ ನಾನು ಪ್ರೊಹಿಬಿಷನ್ ವಿಷಯ ಪ್ರಸ್ತಾಪ ಮಾಡುವುದಿಲ್ಲ ಮತ್ತು ಈ ವರದಿ ಮೇಲಿನ ಚರ್ಚೆ ಪಾನ ಪ್ರತಿಬಂಧಕದ ವಿಷಯದ ಕಡೆಗೆ ಹೊರಳಬಾರದು ಎಂಬುದು ನನ್ನ ಆಸಕ್ತಿಯಾಗಿದೆ. ಏಕೆಂದರೆ ಅದು ಬೇರೆ ವಿಷಯ ಆಗುತ್ತದೆ, ಇದು ಬೇರೆ ವಿಷಯ ಆಗುತ್ತದೆ. ಮೂಲ ದೃಷ್ಟಿ ಪಾನ ಪ್ರತಿಬಂಧವನ್ನು ಈ ದೇಶದಲ್ಲಿ ಈಗ ಇಟ್ಟಿರತಕ್ಕ ರೀತಿಯಲ್ಲಿ ಜಾರಿಗೆ ಕೊಟ್ಟು ಇಂತಹ ಒಂದು ಮನೂದೆಯನ್ನು ಅನ್ವಯ ಮಾಡತಕ್ಕದ್ದರಲ್ಲಿ ಎಷ್ಟುಮಟ್ಟಿಗೆ ಸಾಫಲ್ಯತೆ ಎರಡು ದೃಷ್ಟಿಯಿಂದ ಉಂಟಾಗುತ್ತದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಅದನ್ನೇ ನಾನು ಮೊದಲೇ ಪ್ರಾರ್ಥನೆ ಮಾಡಿಕೊಂಡೆ, ಸರ್ಕಾರದವರು ಈ ವಿಷಯದಲ್ಲಿ ಸಮಗ್ರವಾಗಿ ತಮ್ಮ ಅಭಿಪ್ರಾಯವನ್ನು, ಧೋರಣೆಯನ್ನು ಪುನರ್ವಿಮರ್ಶೆ ಮಾಡತಕ್ಕದ್ದು ಬಹಳ ಅತ್ಯಗತ್ಯವಾಗಿದೆ

(ಶ್ರೀ ಎಸ್. ಗೋಪಾಲಗೌಡ)

ಎಂದು ನನಗೆ ಅನಿಸುತ್ತದೆ. ಈ ಬೇಕ್‌ಚಂದ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಭಾರತ ಸರ್ಕಾರದವರು ನೇಮಕ ಮಾಡಿ ಅವರು ಇವತ್ತು ಈ ಪಾನಪ್ರತಿಬಂಧ ಜಾರಿಯಲ್ಲಿರತಕ್ಕ ರಾಜ್ಯಗಳಲ್ಲಿ ಅಥವಾ ಭಾಗಗಳಲ್ಲಿ ಈ ಕಾನೂನು ಎಷ್ಟುಮಟ್ಟಿಗೆ ಕಾರ್ಯಗತವಾಗುತ್ತಾ ಇದೆ ಈ ಧೋರಣೆ ಎಷ್ಟುಮಟ್ಟಿಗೆ ಜನೋಪಕಾರಿಯಾಗಿದೆ ಇದರಲ್ಲಿ ಏನು ಮಾರ್ಪಾಡು ಮಾಡಬೇಕು ಎನ್ನುವುದನ್ನು ಸೂಚಿಸುವುದಕ್ಕೆ ಆ ಸಮಿತಿ ಒಂದು ವರದಿಯನ್ನು ಸಲ್ಲಿಸಿತು. ಆ ವರದಿಯನ್ನು ಸರ್ಕಾರದವರು ಕನ್ನಡ ಬುಟ್ಟಿಗೆ ಹಾಕಿದ್ದಾರೆ ಎಂದರೆ ಬಹಳ ದೊಡ್ಡ ಶಬ್ದ ಆಗಬಹುದೋ ಏನೋ ಅದರ ಮೇಲೆ ಧಬ್ರುವಾಗಿ ಕೂತುಬಿಟ್ಟಿದ್ದಾರೆ. ಹಿಂದೆಯೂ ಹೋಗುತ್ತಾ ಇಲ್ಲ, ಮುಂದೆಯೂ ಹೋಗುತ್ತಾ ಇಲ್ಲ. ಒತ್ತಡಗಳು ಬರುವ ಕಡೆಗೆ ಮುಂಬೈನ ಮುಖ್ಯ ಮಂತ್ರಿಯವರು ತಮಗೆ ಬೇಕಾದ ಧೋರಣೆಯನ್ನು ಅನುಸರಿಸುವುದು ಅಥವಾ ಉತ್ತರ ಪ್ರದೇಶದವರು ತಮಗೆ ಅನುಕೂಲವಾದ ಧೋರಣೆಯನ್ನು ಅನುಸರಿಸುವುದು ಅಥವಾ ವೆಸ್ಟ್ ಬೆಂಗಾಲ್ ಅವರು ತಮಗೆ ಬೇಕಾದ ಧೋರಣೆಯನ್ನು ಅನುಸರಿಸುವುದು, ಮೈನೂರು ರಾಜ್ಯದವರೂ ಕೂಡ ತಮಗೆ ಎಷ್ಟು ಕಾಲ ಬೇಕು ಎಂದು ಅನ್ನಿಸುತ್ತದೆಯೋ ಅಷ್ಟು ಕಾಲ ಎಡಬಿಡಂಗಿ ಧೋರಣೆಯನ್ನು ಅನುಸರಿಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ರಾಷ್ಟ್ರೀಯ ಪ್ರಾಮುಖ್ಯತೆಯ, ರಾಷ್ಟ್ರೀಯ ಧೋರಣೆಗೆ ಸಂಬಂಧಪಟ್ಟ ಒಂದು ವಿಷಯದ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ತಾಳಿರತಕ್ಕ ಈ ಒಂದು ಧೋರಣೆ ವಿಷಾದನೀಯ. ಇದರಲ್ಲಿ ಏನಾದರೂ ಒಂದು ಸಮಗ್ರವಾದ, ದೇಶದಲ್ಲಿ ಎಲ್ಲಾ ರಾಜ್ಯಗಳಿಗೂ ಅನ್ವಯವಾಗತಕ್ಕ ಒಂದು ಕಾನೂನನ್ನು ಜಾರಿಗೆ ತರುವುದು ಬಹಳ ಅವಶ್ಯಕವಾಗಿದೆ. ಮುಖ್ಯವಾಗಿ ನಾವು ಈ ಮನೂದೆಯಲ್ಲಿ ನೋಡಬೇಕಾದ್ದು ಎಂದರೆ—ಅಬ್ಕಾರಿ ಬಾಬು ಎಂದರೆ ಯಾವಯಾವುದು, ಅವುಗಳನ್ನು ಯಾರು ಹೇಗೆ ಉತ್ಪಾದನೆ ಮಾಡಬೇಕು, ಅವುಗಳ ನಿಯಂತ್ರಣ ಹೇಗೆ, ಮಾರಾಟ ಹೇಗೆ ನಡೆಯತಕ್ಕದ್ದು, ಅವುಗಳ ಮೇಲೆ ಎಷ್ಟುಮಟ್ಟಿನ ಡ್ಯೂಟಿ, ಕರ, 'ಕಂದಾಯ ಇವುಗಳನ್ನು ಸರ್ಕಾರ ವಿಧಿಸಬೇಕು, ಯಾವ ಮಟ್ಟದಲ್ಲಿ ಹೇಗೆ ಎನ್ನುವುದರ ಬಗ್ಗೆ ಈ ಮನೂದೆಯಲ್ಲಿ ಕೆಲವು ಕಲಂಗಳನ್ನು ನಾವು ಮಾಡಿದ್ದೇವೆ. ಇದರಲ್ಲಿ ನನ್ನ ಅಭಿಪ್ರಾಯ, ನಾನು ಮೊದಲು ಅನೇಕ ಸಲ ಸ್ಪಷ್ಟವಾಗಿ ಹೇಳಿದ್ದೇನೆ. ಹೇಗೆ ವಿಷಮಯವಾದಂಥ ಔಷಧಿಗಳನ್ನು ನಾವು ನಿಯಂತ್ರಿಸುತ್ತೇವೆಯೋ ಅದೇ ರೀತಿಯಲ್ಲಿ ಈ ಉನ್ಮಾದಕ ವಸ್ತುಗಳ ನಿಯಂತ್ರಣವನ್ನೂ ಮಾಡಬೇಕಾಗುತ್ತದೆ. ಅದರ ಉತ್ಪಾದನೆ, ಹಾಗೂ ಉತ್ಪಾದನೆಯ ಮೂಲ ವಸ್ತುಗಳನ್ನು ಸೇರಿಸಿಕೊಂಡು ಅದರ ಕಟ್ಟು ಕಡೆಯ ವಿತರಣೆ ಅಥವಾ ಕನ್‌ಸಂಷನ್ ಎಂದು ಹೇಳಬಹುದು ಅದನ್ನು ಯಾರು ಭುಂಜಿಸುತ್ತಾರೋ ಅಲ್ಲಿಯತನಕ ರಾಷ್ಟ್ರೀಯ ಧೋರಣೆ ನಮ್ಮ ಮುಂದೆ ಬರಬೇಕಾಗಿದೆ. ಈ ಮನೂದೆಯಲ್ಲಿ ಅಂತಹ ಒಂದು ದೊಡ್ಡ ಹೆಜ್ಜೆಯನ್ನು ಆ ದಿಕ್ಕಿನಲ್ಲಿ ಇಡತಕ್ಕ ಸನ್ನಿವೇಶ ಇಲ್ಲ. ಹಳೆಯ ಕಾಲದಿಂದಬ್ರಿಟಿಷರ ಕಾಲದಿಂದ ಯಾವ ಒಂದು ಮನೂದೆ ಇತ್ತೋ ಅದೇ ಮನೂದೆಯಲ್ಲಿ ಕೆಲವೊಂದು ಅಲ್ಲಿ ಇಲ್ಲಿ ತಿದ್ದುಪಡಿಗಳನ್ನು ಮಾಡತಕ್ಕ ಪ್ರಯತ್ನ ಮಾತ್ರ ನಡೆದಿದೆ. ಯಾರೋ ಒಬ್ಬಿಬ್ಬರು ಡೆಪ್ಯೂಟಿ ಕಮಿಷನರು ಇರಬೇಕು. ಪಾರ್ಟ್ ಆಫ್ ದಿ ಡಿಪ್ಯೂಟ್ಯೆಗೆ ಒಬ್ಬ ಅಸಿಸ್ಟೆಂಟ್ ಕಮಿಷನರನ್ನು ಇಡಬೇಕು, ಹೇಗೆ ಹೇಗೆ ನಿಯಂತ್ರಿಸತಕ್ಕದ್ದು, ಹರಾಜು ಮಾಡತಕ್ಕ ಬಗ್ಗೆ, ಅಂಗಡಿಗೆ ತೆಗೆದುಕೊಂಡು ಹೋಗುವ ಬಗ್ಗೆ, ಅದರ ಮೇಲೆ ಕರ ಹೇರುವ ಬಗ್ಗೆ ಮೂಲ ಭೂತವಾದ ಯಾವ ಬದಲಾವಣೆಯೂ ಈ ಮನೂದೆಯಲ್ಲಿ ಅಡಕವಾಗಿಲ್ಲ. ಮೇಲಾಗಿ ಸಾರ್ವತ್ರಿಕ, ಸಾರ್ವಜನಿಕ ಹಿತ ಮತ್ತು ರಾಷ್ಟ್ರದ ಆರೋಗ್ಯ ಮತ್ತು ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ ಈ ಬಾಬಿಗೆ ಏನು ಪ್ರಾಮುಖ್ಯತೆಯನ್ನು ಕೊಡಬೇಕೋ ಅದು ಈ ಮನೂದೆಯಲ್ಲಿ ಇಲ್ಲ. ಆ ದೃಷ್ಟಿಯಿಂದ ಈ ಮನೂದೆ ಅಷ್ಟುಮಟ್ಟಿಗೆ ವಿಫಲವಾಗುತ್ತದೆ, ಅಪರಿಪೂರ್ಣವಾಗುತ್ತದೆ; ಮತ್ತು ಇವತ್ತಿನ ಸನ್ನಿವೇಶದಲ್ಲಿ ಇನ್ನೂ ಒಂದು ಅರ್ಥವಾಗುತ್ತದೆ ಅಷ್ಟುಮಟ್ಟಿಗೆ ಇದಕ್ಕೆ ಯಾವ ಅರ್ಥವೂ ಬರುವುದಿಲ್ಲ. ಇಲ್ಲಿ ನಾನು ಹೇಳುವುದೇನೆಂದರೆ, ಸಂಪೂರ್ಣವಾಗಿ ಈ ವಸ್ತುಗಳನ್ನು ಉತ್ಪಾದಿಸುವ, ಅವುಗಳನ್ನು ಸ್ಟಾಕ್ ಇಡತಕ್ಕ ಹಾಗೂ ವಿತರಣೆ ಮಾಡತಕ್ಕ ಕೆಲಸವನ್ನು ಎಷ್ಟೇ ಇದು ಅನಿಷ್ಟಕಾರಕ ಎಂದು ಹೇಳುವುದಾದರೂ ಅನಿವಾರ್ಯವಾಗಿ ಇದನ್ನು ಸರ್ಕಾರವೇ ವಹಿಸಿಕೊಳ್ಳಬೇಕು—ರಾಷ್ಟ್ರೀಯ ಮಟ್ಟದಲ್ಲಿ ಕೂಡ. ಖಾಸಗಿ ಜನರು ತಮಗೆ ಇಷ್ಟಬಂದ ರೀತಿಯಲ್ಲಿ ಯಾವುದೋ ಒಂದು ಕಾನೂನಿನ ಚೌಕಟ್ಟಿನ ಆಡಿಯಲ್ಲಿ, ಇತಿಮಿತಿಯಲ್ಲಿ ನಡೆಸಿಕೊಂಡು ಹೋಗತಕ್ಕ ವ್ಯಾಪಾರ ಆಗಬಾರದು, ಉದ್ಯಮ ಆಗಬಾರದು. ಅದು ಇವತ್ತು ಆಗಿದೆ. ಮತ್ತು ಈ ಉದ್ದಿಮೆಯಲ್ಲಿ ತೊಡಗಿರತಕ್ಕ ಜನರು ಇಂತಹ ಕಾಯಿದೆಯನ್ನು ರೂಪಿಸುವುದರಲ್ಲಿ, ಇಂತಹ ಕಾಯಿದೆ ಇರಬೇಕೆನ್ನುವುದರಲ್ಲಿ ಅವರ ಬಲವಾದ ಕೈವಾಡವನ್ನೂ ಕೂಡ ಹೊಂದಿದ್ದಾರೆ, ಅವರ ಹಿತ ಇಂತಹ ಕಾಯಿದೆಗಳಿಂದ ರಕ್ಷಣೆ ಆಗಬೇಕೆನ್ನುವುದು ಅವರ ಮೂಲ ಉದ್ದೇಶ ಇದರ ಬಗ್ಗೆ ಅವರು ದೇಶಾದ್ಯಂತ ಪ್ರಯತ

ಮಾಡಿದರು. ಇನ್ನೊಂದು ಪಿನಾಗುಶ್ಡೆ ಎಂದರೆ ಇವತ್ತು ನಾವು ಕಾನೂನನ್ನು ಮಾಡುತ್ತಾ ಕೆಲವು ನಿರ್ಬಂಧಗಳನ್ನು ಹಾಕಿದ್ದೇವೆ. ಈ ನಿರ್ಬಂಧಗಳು ಎಷ್ಟು ಮಟ್ಟಿಗೆ ಕಾರ್ಯತ ಆಚರಣೆಯಲ್ಲಿ ಬರುತ್ತವೆ, ಅವುಗಳನ್ನು ಕಾರ್ಯಗತಗೊಳಿಸತಕ್ಕ ಸಿಬ್ಬಂದಿಯನ್ನು ಹೊಂದಿದ್ದೇವೆ ಎಂಬುದನ್ನು ನಾವು ಏಮರ್ಶೆಮಾಡಿದರೆ ಬಹಳ ದೊಡ್ಡ ಪ್ರಮಾಣದಲ್ಲಿ ಈ ಕಾನೂನು ಉಲ್ಲಂಘನೆ ನಡೆದಿದೆ, ನಡೆಯುತ್ತಾ ಇದೆ.

ಪ್ರತ್ಯೇಕ ಸಿಬ್ಬಂದಿಯನ್ನು ನಾವು ಏರ್ಪಾಡು ಮಾಡಿದರೂ ಕೂಡ ಗಾಂಜಾ ಬೆಳೆಯುವುದು, ಗಾಂಜಾ ಮಾರಾಟ ಇದ್ದು ಇಂತಹ ಉದ್ದಿಮೆ ಎಷ್ಟರಮಟ್ಟಿಗಿದೆ, ಕಾನೂನು ಬಾಹಿರವಾದ ರೀತಿಯಲ್ಲಿ ರಾಭ ಗಳಿಸುವುದಕ್ಕೆ ಅವಕಾಶವಿದೆಯೇ ಎನ್ನುವುದನ್ನು ಸರ್ಕಾರದವರು ಈಗಾಗಲೇ ಅನೇಕ ಸಂದರ್ಭಗಳನ್ನು ನೋಡಿ ಅರ್ಥಮಾಡಿಕೊಂಡಿರಬಹುದು. ಆದೇ ರೀತಿ ಇವೊತ್ತು ನಾವು ಈ ಸಾರಾಯಿಗಳನ್ನು ಉತ್ಪಾದನೆ ಮಾಡುವುದಕ್ಕೆ ಖಾಸಗಿಯವರಿಗೆ ಏನು ಲೈಸನ್ಸನ್ನು ಕೊಡುತ್ತಾರೆ ಅಲ್ಲಿ ಎಷ್ಟರ ಮಟ್ಟಿಗೆ ಈ ಎರ್ಲಾ ಕಲಂಗಳು ಅಕ್ಷರಶಃ ಮತ್ತು ಅವುಗಳ ಮೂಲ ಭಾವನೆಯಲ್ಲಿ ಕಾರ್ಯಗತ ಆಗಿವೆ, ಆಗುತ್ತಾ ಇವೆ ಎನ್ನುವ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ಮಾಹಿತಿ ಇದೆ, ಇದ್ದರೂ ಆಗುತ್ತಾ ಇಲ್ಲ. ಆದುದರಿಂದಾಗಿ ಎಷ್ಟು ಕಾನೂನನ್ನು ನಾವು ಜಟಿಲ ಅಥವಾ ಇನ್ನೂ ಬಲಯುತವಾಗಿ ಮಾಡಿದರೂ ಕೂಡ ಅವುಗಳನ್ನು ಉಲ್ಲಂಘಿಸತಕ್ಕ ಪರಿವರ್ತನೆ ಈ ಒಂದು ಉದ್ಯಮದಲ್ಲಿ ಇದೆ ಎನ್ನುವುದು ನಮಗೆ ನೂರಕ್ಕೆ ನೂರರಷ್ಟು ಸ್ಪಷ್ಟವಾಗಿದೆ. ಹೀಗಿರುವಾಗ ನಾನು ಸರ್ಕಾರದವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ ರಾಷ್ಟ್ರೀಜನತೆಯ ಆರೋಗ್ಯ ದೃಷ್ಟಿಯಿಂದ ಮತ್ತು ಹಣಗಳಿಕೆಯ ದೃಷ್ಟಿಯಿಂದ ಕೂಡ ನಿಯಂತ್ರಣ ಸರಿಯಾದ ರೀತಿಯಲ್ಲಿ ನಡೆಯಬೇಕು ಎಂದು. ಆದರೆ ಉತ್ಪಾದನೆಯಲ್ಲಿ ತೊಡಗತಕ್ಕ ಮೂಲ ಕಚ್ಚಾ ವಸ್ತುಗಳನ್ನು ಪಡೆದು ಅವನ್ನು ಎಲ್ಲಿಯವರೆಗೆ ಉಪಯೋಗಿಸುತ್ತೀವೋ ಅಲ್ಲಿಯ ತನಕವೂ ನಿಯಂತ್ರಣ.....

4-30 P.M.

Mr. SPEAKER.—Is the Hon'ble Member suggesting some more provisions into the Statute to make it tighter? ಇನ್ನೂ ಸ್ವಲ್ಪ ನಿಬಂದನೆಗಳನ್ನು ಸೇರಿಸಬೇಕೆಂದು ಹೇಳುತ್ತಿದ್ದೀರಾ?

ಶ್ರೀ ಎಸ್. ಗೋಪಾಲ ಗೌಡ.—ಇನ್ನೂ ಸೇರಿಸಬೇಕು. ಅದೂ ಅಲ್ಲದೆ ಇದು ಬಹಳ ತಡವಾಗಿ ಬಂದಿದೆ. ಇದು ತೃಪ್ತಿಕರವಾದ ಮಸೂದೆಯಾಗಿಲ್ಲ. ಈಗಾಗಲೇ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ತಿದ್ದುಪಡಿ ಮಾಡಿದ್ದಾರೆ. ಅದರೂ ಕೂಡ ಇದು ಉದ್ದೇಶವನ್ನು ಸಾರ್ಥಕ ಪಡಿಸತಕ್ಕ ಮಸೂದೆ ಆಗುವುದಿಲ್ಲ ಎನ್ನುವುದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ ಒಂದು ಪ್ರತ್ಯೇಕ ಅಭಿಪ್ರಾಯ ಇದೆ ಎಂದು ಮಾನ್ಯ ಅಧ್ಯಕ್ಷರು ನನ್ನ ಮಾತುಗಳಿಂದ ಗಮನಿಸಿರಬಹುದು. ನಾನು ಹೇಳಿರುವುದು ಒಂದು, ಎರಡು, ಮೂರು, ನಾಲ್ಕು ಕ್ಲಾಸುಗಳ ಒಳಗಡೆ ಬರುವ ಅಭಿಪ್ರಾಯವಲ್ಲ ಎಂದು ನನಗೆ ಅನ್ನಿಸಿದೆ. ಮಸೂದೆಯನ್ನು ನಿರೀಕ್ಷಿಸುವ ಸಮಯದಲ್ಲಿ ಅವುಗಳನ್ನು ಸರ್ಕಾರದವರು ಗ್ರಹಿಸಬೇಕು. ಪ್ರತಿವರ್ಷವೂ ಮಸೂದೆ ಮಾಡುವುದು ಅಲ್ಲ. ಪ್ರತಿಯೊಂದು ಡಿಪ್ಯಾ ಡೆಪ್ಯುಟಿ ಕಮೀಷನರ್ ತೆಗೆಯುವುದಕ್ಕೆ ಪ್ರತಿದಿವಸ ಮಸೂದೆ ಮಾಡುವುದಕ್ಕಾಗುವುದಿಲ್ಲ. ಒಂದು ಮೂಲ ದೃಷ್ಟಿ ಬೇಕು. ಎಷ್ಟು ಬೇಡ ಎಂದರೂ ಪ್ರೊಹಿಬಿಷನ್ ಗಂಟು ಬಿದ್ದಿದೆ. ಎಷ್ಟು ಪ್ರಸ್ತಾಪ ಮಾಡಬಾರದು ಎಂದರೂ ಪಾನನಿರೋಧದ ಸಾರ್ಥಕತೆ ಇದರ ಮೇಲೆ ನಿಂತಿರುತ್ತದೆ. ಈ ದೃಷ್ಟಿಯಿಂದ ಎರಡು ಭಾವನೆಗಳನ್ನು ಕ್ರೋಢೀಕರಿಸಿ, ರಾಷ್ಟ್ರೀಯ ಹಿತ ದೃಷ್ಟಿಯಿಂದ ಒಂದು ನಿರ್ಣಯವನ್ನು ಸರ್ಕಾರದವತಿ ಕೇಂದ್ರದ ಜೊತೆಯಲ್ಲಿ ತೆಗೆದುಕೊಂಡು ಈ ವಿಷಯದಲ್ಲಿ ಒಂದು ಹೊಸ ದೃಷ್ಟಿ ಮತ್ತು ಹೊಸ ವ್ಯವಸ್ಥೆಯನ್ನು ರೂಪಿಸುವುದು ಬಹಳ ಅತ್ಯಗತ್ಯ ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದರಲ್ಲಿ ಸಮಿತಿಯವರು ಇಂಡಿಯನ್ ಲಕ್ಕರ್ ಎಂದು ಬರೆದಿದ್ದಾರೆ. ಕಂಟ್ರಿಲಕ್ಕರ್ ಅಂದರೆ ಸರಿಯಾಗಿ ಕಾಣುವುದಿಲ್ಲವೆಂದೋ ಏನೋ ಹೀಗೆ ತಿದ್ದುಪಡಿ ಮಾಡಿದ್ದಾರೆ. ಮೊದಲು ಇಲ್ಲಿ ತಯಾರಾಗುವ ಎಲ್ಲ ಕಂಪೆನಿಗಳ ಸಾರಾಯಿಗೂ ಕಂಟ್ರಿಲಕ್ಕರ್ ಎಂದು ಹೇಳುತ್ತಿದ್ದರು, ಎಲ್ಲ ಕಡೆಗಳಲ್ಲೂ ಹಾಗೆ ಹೇಳುವುದುಂಟು. ಈ ಸಮಯದಲ್ಲಿ ಕಳ್ಳಬಟ್ಟಿ ವಿಚಾರ ಆದುದರಿಂದ ಕಳ್ಳಬಟ್ಟಿ ವಿಚಾರ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ, ಅದ ಪ್ರತೇಕ ವಿಷಯ. ಬೇರೆ ಬರ್ಗಂಡಿ ವಿಂಟಾದ ದೇಶಗಳಲ್ಲಿ ಹೆಚ್ಚು ಪ್ರಾಶಸ್ತ್ಯವಿರುವ ಬ್ರಾಂಡಿಗೆ ಆಯಾ ದೇಶಗಳ ಹೆಸರನ್ನು ಕೊಡುತ್ತಾರೆ. ಇಲ್ಲಿ ಸಮಿತಿಯವರೇಕೆ ಇಂಡಿಯನ್ ಲಕ್ಕರ್ ಎಂಬ ಹೆಸರನ್ನಿಟ್ಟರೋ ಗೊತ್ತಿಲ್ಲ. ದೇಶಸ್ವತಂತ್ರವಾದ ಮೇಲೆ ಕಂಟ್ರಿ ಲಕ್ಕರ್ ಎಂಬುದಕ್ಕೆ ಬದಲಾಗಿ ಇಂಡಿಯನ್ ಲಕ್ಕರ್ ಎಂದು ಕರೆ

(ಶ್ರೀ ಎಸ್. ಗೋಪಾಲಗೌಡ)

ಯುವುದು ಸೂಕ್ತ ಎಂದು ಅವರು ಅಭಿಪ್ರಾಯ ಪಟ್ಟಿರಬಹುದು. ಮಸೂದೆಯ 3ನೆಯ ಪುಟದಲ್ಲಿ 8ನೆಯ ಕ್ಲಾಜಿನಲ್ಲಿ

> "Clause 2, sub-clause (3)—The Committee are of the opinion that all liquor produced or manufactured in India should be called Indian liquor and not country liquor. The sub-clause has accordingly been amended"

ಎಂದು ಸೆಲೆಕ್ಟ್ ಕಮಿಟಿಯವರು ತಿಳಿಸಿದ್ದಾರೆ. ಇದನ್ನು ಹೇಗೆ ಮಾರ್ಪಾಡು ಮಾಡಬೇಕೆಂಬುದನ್ನು ಯೋಚಿಸಿ ಮಾನ್ಯ ಸಚಿವರೇ ತಿದ್ದುಪಡಿ ತರುವುದು ಒಳ್ಳೆಯದೆಂದು ಕಾಣುತ್ತದೆ. ಇದಕ್ಕೆ ಹೇಗೆ ನಾಮಕರಣ ಮಾಡಬೇಕೆಂಬ ವಿಚಾರವದ್ನು ಅವರಿಗೇ ಬಿಡುತ್ತೇನೆ. ಲೈಸೆನ್ಸ್ ಕೊಟ್ಟಮೇರೆ ಬೆಂಗಳೂರಿನಲ್ಲಿ ತಯಾರಿಸುವುದಕ್ಕೆ ಬೆಂಗಳೂರಿನ ಹೆಸರನ್ನೇ ಕೊಡಬಹುದು, ಉತ್ತರ ದೇಶದಲ್ಲಿ ತಯಾರಿಸುವುದಕ್ಕೆ ಅವರು ಬೇರೆ ಹೆಸರನ್ನು ಕೊಡುತ್ತಾರೆ. ಆದರಮೇಲೆ ಅದನ್ನು ಸೇವಿಸುವವರು ಯಾವ ಕಂಪೆನಿಯದು ಒಳ್ಳೆಯದೆಂಬುದನ್ನು ಚುನಾಯಿಸುತ್ತಾರೆ. ಅದಕ್ಕೆ ಕ್ರಯ ಹೆಚ್ಚುಕಡಮೆ ಇರುತ್ತದೆ. ಆದರೆ ಒಟ್ಟು ಎಲ್ಲಾ ಸೇರಿ ಇಂಡಿಯಾದೇಶದಲ್ಲಿ ತಯಾರಾಗುವುದಕ್ಕೆ ಇಂಡಿಯನ್ ಲಿಕ್ಕರ್ ಎಂದು ಹೇಳುವುದಕ್ಕೆ ಒಂದು ಕಾಂಪ್ರಿಹೆನ್ಷನ್ ಇದೆ. ಫಾರಿನ್ ಲಿಕ್ಕರ್ ಅಲ್ಲ ಎಂದು ಹೇಳುವುದಕ್ಕೆ ಇಂಡಿಯನ್ ಲಿಕ್ಕರ್ ಎಂದು ಕರೆದರೆ ಆದು ಸಮಂಜಸವಾಗುವುದಿಲ್ಲ. ಯಾವ ದೇಶದಲ್ಲಿ ತಯಾರಾಗುವುದೋ ಆ ದೇಶದ ಹೆಸರನ್ನು ಇಟ್ಟು ಕರೆಯುತ್ತಾರೆಂದು ಕಾಣಿಸುತ್ತದೆ. ಮಾನ್ಯ ಸಚಿವರು ವಿದೇಶ ಪ್ರವಾಸ ಮಾಡಿದ್ದಾರೆ, ಅಲ್ಲಿನ ಪದ್ಧತಿ ಅವರು ಹೇಳಬಹುದು. ರಷ್ಯನ್ ಓಡ್ಕ ಎಂದು ಹೇಳುವುದಿಲ್ಲ, ಬರೀ ಓಡ್ಕ ಎಂದು ಹೇಳುತ್ತಾರೆ.

ಹೆಸರಿನ ಬಗ್ಗೆ ವಿಶೇಷ ವಿವಾದವನ್ನು ತರುವುದಕ್ಕೆ ಪ್ರಯತ್ನ ಪಡವೆ ಇದ್ದರೂ ಇಷ್ಟೊಂದು ಮಟ್ಟಿಗೆ 'ಇಂಡಿಯನ್' ಎಂಬ ಗುಣವಾಚಕವನ್ನು ಇಟ್ಟುಕೊಂಡರೆ ಅದು ಬಹುಶಃ ಹಳೆಯ ಪರಂಪರೆಯನ್ನು ದಾಟಿ ಬರುವ ಒಂದು ಘಟ್ಟವನ್ನು ಸೂಚಿಸುತ್ತದೆ. ಅದು ತನ್ನ ಅರ್ಥವನ್ನು ತಾನೇ ಸ್ಪಷ್ಟ ಪಡಿಸುತ್ತ ಇಲ್ಲ ಎಂದು ನನಗೆ ಅನ್ನಿಸುತ್ತದೆ. ಒಂದು ಮಾಲನ್ಯ ಅದರಲ್ಲಿ ಉಳಿದುಕೊಂಡಿದೆ ಎಂದು ನನಗನ್ನಿಸುತ ದೆ.

ಅಧಿಕಾರಿಗಳು ಹೇಗೆ ಕೆಲಸ ಮಾಡಬೇಕು ಎಂದು ಹೇಳುವ ಕ್ಲಾಜುಗಳನ್ನು ಸ್ವಲ್ಪ ತಿದ್ದುಪಡಿ ಮಾಡಿದ್ದಾರೆ ಸಮಿತಿಯವರು. ಹತ್ತನೆಯ ಕ್ಲಾಜನ್ನು ಸಮಿತಿಯವರು ಕೈ ಬಿಟ್ಟಿದ್ದಾರೆ, ಅದು ಅವಶ್ಯಕವಲ್ಲ ಎಂದು. ಇಲ್ಲ ಸಮಿತಿಯವರು ಒಂದು ದೊಡ್ಡ ಮಾರ್ಪಾಡನ್ನು ಮಾಡಿದ್ದಾರೆ. ಇದುವರಗೂ ಫಾರೆನ್ ಲಿಕರ್ಸ್‌ಗೆ ವಿನಾಯಿತಿ ಇತ್ತು. ಅದನ್ನು ತೆಗೆದು ಹಾಕಿದ್ದಾರೆ. ಇದು ಅತ್ಯಾವಶ್ಯಕವಾದ ತಿದ್ದುಪಡಿ ಎಂದು ನಾನು ಭಾವಿಸುತ್ತೇನೆ. ಇದು ಇಲ್ಲದೆ ಇದ್ದುದರ ಪರಿಣಾಮವಾಗಿ ಬಹಳ ಸಲ ನಮ್ಮ ಕೈಗಾರಿಕೆಯ ಮೇಲೆ ದೊಡ್ಡ, ಅಗಾಧ ಹೊಟ್ಟು ಬೀಳುತ್ತ ಇದ್ದುದಲ್ಲವೆ ಸಾರೋದ್ಧಾರವಾಗಿ ಈ ವಸ್ತುವಿನ ಕಳ್ಳ ವ್ಯಾಪಾರವೂ, ತೆರಿಗೆಯನ್ನು ತಪ್ಪಿಸಿಕೊಳ್ಳತಕ್ಕ ವ್ಯಾಪಾರವೂ ನಡೆದುಕೊಂಡು ಬಂದಿವೆ ಎನ್ನುವುದು ನಮಗೆ ಕಾಣುತ್ತದೆ. ಆ ದೃಷ್ಟಿಯಿಂದ ಈ ಒಂದು ತಿದ್ದುಪಡಿ ಸ್ವಾಗತಾರ್ಹವೆಂದು ನನಗನ್ನಿಸುತ್ತದೆ.

ಬಹಳ ಕಡೆಗಳಲ್ಲಿ ಕಮಿಷನರ್ ಹಾಕಬಹುದಾದ ರೀತಿಯಲ್ಲಿ ನಿರ್ಬಂಧಗಳನ್ನು ಸರ್ಕಾರದವರು ರಚಿಸಿ ಅದನ್ನು ಅವರ ಅನುಕೂಲಕ್ಕಾಗಿ, ಅವರಿಗೆ ಅನುಕೂಲಕ್ಕೆ ತಕ್ಕ ಹಾಗೆ ಆಚರಣೆಯಲ್ಲಿ ತರುವುದು ಎಂದು 'ಆಮ್ನಿಬಸ್ ಕ್ಲಾಜ್' ಎಂದು ಏನು ಹೇಳುತ್ತಾರೆಯೋ ಅಂಥಗಳನ್ನು ಬಹಳ ಕಡೆ ಇಟ್ಟುಕೊಂಡಿದ್ದಾರೆ. ಇಷ್ಟು ವರ್ಷಗಳನಂತರ ಮಸೂದೆಯನ್ನು ಸರ್ಕಾರ ಬರೆಯುವುದಾದರೂ ಈ ರೀತಿ ಆದರೆ ಇದರಲ್ಲಿ ಏನೂ ಪ್ರಗತಿ ಸಾಧನೆಯಾಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಪ್ರಥಮತಃ ತರುವಂಥ ಮಸೂದೆಯಾದರೆ ಬಹಳ ಅನುಭವವಿರುವುದಿಲ್ಲ, ಏನು ರೆಗ್ಯುಲೇಷನ್‌ಗಳು ಬೇಕೋ, ಯಾವ ತರಹ ಕಾನೂನು ಮಾಡಬೇಕೋ ಬಂಧನೆಗಳನ್ನು ಮಾಡಬೇಕೋ ಅದು ಯಾವುದೂ ಗೊತ್ತಾಗುವುದಿಲ್ಲ. ಆದರೆ ನೂರು ವರ್ಷಗಳ ಅಬ್ಕಾರಿ ಅನುಭವದಲ್ಲಿ ಏನೇನು ಕಟ್ಟುನಿಟ್ಟಾಗಿ ಆಚರಣೆಯಲ್ಲಿ ತರಬೇಕು ಎಂದು ಗೊತ್ತಾಗಿರುವ ಸಮಯದಲ್ಲಿ ಬಹಳ ಕಡೆ ಇಂಥ ವಿಧಿಗಳನ್ನು ಹೇರಿಸುವುದು ಉಚಿತವೇ ಎಂದು ನೋಡಬೇಕು. ಇಂಥವು ಇದರಲ್ಲಿ ಅನೇಕ ಕಡೆ ಇವೆ.

ಅನೇಕ ಸಲ ನೋಟಿಫಿಕೇಷನ್ ಮಾಡುತ್ತಾರೆ. ಅಂಗಡಿಯನ್ನು ಮುಚ್ಚುವುದಕ್ಕೆ ಒಂದು ತಿಂಗಳ ನೋಟೀಸ್ ಕೊಡಬೇಕು ಎಂದು ಬಹಳ ಔದಾರ್ಯವನ್ನು ತೋರಿಸಿದ್ದಾರೆ. ಎಲ್ಲ ಕಾನೂನು

ಗಳಲ್ಲಿಯೂ ಒಂದು ತಿಂಗಳ ನೋಟೀಸ್ ಎಂದು ಇರುತ್ತದೆ, ನಿಜ. ಇಂಗ್ಲೆಂಡ್ ದೇಶದಲ್ಲಿ ಸಹ ಅವರು ಮಾಡುವ ಕಾನೂನುಗಳಲ್ಲಿ 30 ದಿವಸಗಳ ನೋಟೀಸ್ ಕೊಡುತ್ತಾರೆ. ಆದರೆ ಇದು ಎಂಥ ವ್ಯವಹಾರ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನೋಟೀಸ್ ಇಲ್ಲದೆ ಕಿತ್ತುಹಾಕಬಹುದು. ಜಸ್ಟಿಸ್‌ನ್ನು ಬಹಳ ದೂರ ತೆಗೆದುಕೊಂಡು ಹೋಗುವುದಾದರೆ ವಕೀಲರು ಬಂದು ಹೈಕೋರ್ಟಿಗೆ ಹೋಗಿ ರಿಟ್ ತಂದು ಮಾಡುವುದರೊಳಗೆ ಎರಡು ಕೋಟಿ ರೂಪಾಯಿಗಳನ್ನು ನುಲಭವಾಗಿ ಮಾಡಿಕೊಳ್ಳಬಹುದು. ಆದ್ದರಿಂದ ವ್ಯವಹಾರ ಎಂಥದ್ದು ಎನ್ನುವುದು ಮುಖ್ಯ ಮಣಿಯಾರ್ಡರನ್ನು ದುರುಪಯೋಗಪಡಿಸಿಕೊಂಡಾಗ ಕೋರ್ಟಿಗೆ ಹೋಗಿ ನಿಮಗೆ ಮಣಿಯಾರ್ಡರ್ ಬಂದಿದೆಯೇ, ಹೇಗೆ ಎನ್ನುವುದಕ್ಕೆಲ್ಲ ವಕಾಲತ್ತು ಹಿಡಿಯುವುದಾದರೆ ನಮಗೆ ಮಣಿಯಾರ್ಡರುಗಳೇ ತಲುಪುವುದಿಲ್ಲ.

ಈಗ ನಾನು ಒಂದು ಬ್ಯೂಯರಿಯಲ್ಲಿರುವ ಅಧಿಕಾರಿಯನ್ನು ಉದಾಹರಣೆಯಾಗಿ ತೆಗೆದು ಕೊಳ್ಳುತ್ತೇನೆ. ಒಬ್ಬ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರು ಖೋಡೇ ಈಶ್ವರಸಾ ಅವರ ಬ್ಯೂಯರಿಯಲ್ಲಿ ಇರುತ್ತಾನೆ. ಅತನ ಸಂಬಳ ಸಾರಿಗೆಗಳನ್ನು ಬ್ಯೂಯರಿಯವರೇ ಕೊಡುತ್ತಾರೆ. ಅಲ್ಲ ಕಾನೂನನ್ನು ನಿಯಂತ್ರಿಸಬೇಕು ಆ ಅಧಿಕಾರಿ. ಅಧಿಕಾರಿಗೆ 'ಡಿಸ್ಕ್ರಿಷನ್' ಇರಬೇಕು. ಆದರೆ ಯಾವ ವಿಷಯದಲ್ಲಿ ಈ 'ಡಿಸ್ಕ್ರಿಷನ್' ಇರಬೇಕು, ಯಾವ ವಿಷಯದಲ್ಲಿ ಇರಬಾರದು ಎನ್ನುವುದನ್ನು ನಾವು ಯೋಚನೆ ಮಾಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಯಾವ ಕ್ಲಾಜಿನ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಹೇಳಿದರೆ ಒಳ್ಳೆಯದು.

ಶ್ರೀ ಎಸ್. ಗೋಪಾಲ ಗೌಡ.—ನಾನು 'ಡೆಲಗೇಷನ್ ಆಫ್ ಪವರ್ಸ್' ವಿಚಾರವಾಗಿ ಮಾತನಾಡುತ್ತಿದ್ದೇನೆ.

> "The State Government may authorise the delegation by the Excise Commissioner or Deputy Commissioner to any person or class of persons specified in such notification, of any powers conferred or duties imposed upon him by or under this Act.''

ಇದು ಒಂದು ಮೂಲ ಕ್ಲಾಜ್. ಇದು ಸಾಮಾನ್ಯವಾಗಿ ಇರುತ್ತದೆ.

ಅಧ್ಯಕ್ಷರು.—ಡೀಸೆಂಟ್ರಲೈಸ್ ಮಾಡಬೇಕು ಎಂದು ಹೇಳುತ್ತೀರಾ?

ಶ್ರೀ ಎಸ್. ಗೋಪಾಲ ಗೌಡ.—ಯಾವ ವಿಷಯದಲ್ಲಿ ಡೀಸೆಂಟ್ರಲೈಸ್ ಮಾಡುವುದು, ಸ್ವಾಮಿ? 'ಮಿಂಟ್' ಡೀ ಸೆಂಟ್ರಲೈಸ್ ಮಾಡುವುದೇ? ಕೊಯಮತ್ತೂರಿನಿಂದ ಬರುತ್ತದೆ ಎಂದು ಹೇಳುತ್ತಾರಲ್ಲ ಹಾಗೆಯೇ? ನಮ್ಮ ಮುಂದೆ ಈಗ ಇರುವುದು ಎಂಥ ವಿಷಯವೆಂದರೆ. ನಾವು ತಯಾರು ಮಾಡುವ ಮಾದಕ ವಸ್ತುಗಳಲ್ಲಿ ವಿಷ ಇರುತ್ತದೆ. 'ಮಿಂಟ್' ಇರುವ ಹಾಗೆಯೇ ಇದೂ ಇದೆ. ಬೆಂಗಳೂರಿನಲ್ಲಿ ಒಂದು ಬಾಟಲ್ ವಿಸ್ಕಿ ತಯಾರಾಗುತ್ತದೆ. ಅದರ ಮೇಲೆ ಸರ್ಕಾರಕ್ಕೆ ಎಷ್ಟು ಡ್ಯೂಟಿ ಬರುತ್ತದೆ ಎಂದು ನೋಡಿದರೆ ಅದರ ಪ್ರಾಧಾನ್ಯತೆ ಮತ್ತು ಪ್ರಮಾಣವನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯ. ಒಂದು ಲಾರಿ ಲೋಡ್ ವಿಸ್ಕಿಯನ್ನು ಲೈಸೆನ್ಸ್ ಇಲ್ಲದೆ ಡ್ಯೂಟಿ ಇಲ್ಲದೆ ಹೊರಗೆ ತೆಗೆದುಕೊಂಡು ಹೋಗಿ ವಾರಾಟ ಮಾಡಿದರೆ ಎಷ್ಟು ಲಾಭ ಬರುತ್ತದೆ ಎಂದು ಹೇಳುವುದಕ್ಕೆ ಸಾಧ್ಯವೇ ಸ್ವಾಮಿ? ಇಂಥ ಸಂದರ್ಭಗಳಲ್ಲಿ ಎಷ್ಟು ವಿಜಿಲೆಂಟ್ ಆಗಿ ಇರಬೇಕು ಎಂದು ಈ ಕಾನೂನಿನಲ್ಲಿಲ್ಲ. ಯಾವುದೋ ಒಂದು ಕಮಿಟಿ ಇದೆಯಲ್ಲ, ಪಬ್ಲಿಕ್ ಅಕೌಂಟ್ಸ್ ಕಮಿಟಿ, ಅವರು ಹೋಗಿ ವಿಸಿಟ್ ಮಾಡಿದರೆ ಗೊತ್ತಾಗುತ್ತದೆ, ಅಲ್ಲಿ ಏನು ವ್ಯವಹಾರ ನಡೆಯುತ್ತಿದೆ ಎಂದು. ಬಹಳ ದೊಡ್ಡ ಪ್ರಮಾಣದಲ್ಲಿ ದೇಶದ ಆದಾಯಕ್ಕೆ ಧಕ್ಕೆ ತರುವುದು ಮಾತ್ರವಲ್ಲ, ಅದಕ್ಕೂ ಮೀರಿದೆ. ಅದನ್ನು ಸರ್ಕಾರ ನಡೆಸಬೇಕು, ಸರ್ಕಾರದ ಕಣ್ಣು ಎದುರಿಗೆ ನಡೆಯಬೇಕು ಎಂದು ನಾವು ಹೇಳುವುದಕ್ಕೆ ಇದೇ ಕಾರಣ. ಅಲ್ಲಿ ತಯಾರಾಗುವುದರ ಸ್ಟ್ರೆಂಗ್ತ್ ಏನು, ಎಷ್ಟು ಉತ್ಪಾದನೆಯಾಯಿತು, ಎಷ್ಟು ಹೊರಗೆ ಹೋಯಿತು, ಎಷ್ಟು ಇದೆ ಎನ್ನುವುದರ ಕರಾರುವಾಕ್ಕಾದ ಲೆಕ್ಕ ಯಾವತ್ತಿಗೂ ನಮಗೆ ಇರಬೇಕು. ಈ ಸಂದರ್ಭದಲ್ಲಿ ನಾನು ಅಧಿಕಾರಿಗಳನ್ನು ದೂರುತ್ತ ಇಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಒಂದು ತಿದ್ದುಪಡಿಯನ್ನು ಕೊಡಬಹುದು.

ಶ್ರೀ ಎಸ್. ಗೋಪಾಲ ಗೌಡ.—ತಿದ್ದುಪಡಿ ಕೊಡುವುದು ಬಹಳ ಕಷ್ಟ. ಅದಕ್ಕೇ ಮಾನ್ಯ ಹಿಗಡೆಯವರಿಗೆ ಈ ಬಗ್ಗೆ ನಾನು ಮೊದಲೇ ಪ್ರಾರ್ಥನೆ ಮಾಡಿಕೊಂಡಿದ್ದೇನೆ.

(ಶ್ರೀ ಎಸ್. ಗೋಪಾಲ ಗೌಡ)

ಈ ಎಲ್ಲ ದೃಷ್ಟಿಯಿಂದ ಈ ಕಾನೂನ್ನು ಅಷ್ಟು ಸ್ಪಷ್ಟವಾಗಿಲ್ಲ ಮತ್ತು ಬಹಳ ನಡಿಲವಾಗಿದೆ. ಹಳ್ಳೀ ಕಾನೂನಿನ ನಳಲನ್ನು ಅಳವಡಿಸಿಕೊಳ್ಳಲು ಪ್ರಯತ್ನ ಮಾಡಿದಂತಿದೆ. ಅದಕ್ಕಿಂತ ಪ್ರತ್ಯೇಕವಾದ ದೃಷ್ಟಿಕೋನ ಈ ಮಸೂದೆಯಲ್ಲಲ್ಲ. ಮೂಲ ಮಸೂದೆಯ ಮೇರೆ ಮಾತನಾಡುವಾಗ ನಾನು ಕೆಲವು ಮಾತುಗಳನ್ನು ಹೇಳಿದ್ದೆ. ಸಮಿತಿಯವರು ಕೆಲವು ನಣ್ಣ ನಣ್ಣ ತಿದ್ದುಪಡಿಗಳನ್ನು ಮಾಡಿದ್ದಾರೆ. ಮೂಲ ಮಸೂದೆಗಿಂತ ಹೆಚ್ಚು ಬದಲಾವಣೆಗಳು ಇವರಲ್ಲೇನೂ ಆಗಿಲ್ಲ. ತಾವು ಯಾವ ಕ್ಲಾಜ್ ಎಂದು ಕೇಳಿದಿರಿ.

ಅಧ್ಯಕ್ಷರು.—ಯಾವಾಗಲೂ ಚರ್ಚೆ ನಡೆಯುವಾಗ ಇಂತಹ ಕ್ಲಾಜಿನ ಮೇಲೆ, ಇಂತಹ ಪಾಯಿಂಟ್ ಮೇಲೆ ಚರ್ಚೆಮಾಡುತ್ತಿದ್ದೇನೆಂದು ಮಾನ್ಯ ಸದಸ್ಯರು ಹೇಳಿದರೆ ನನಗೆ ಆಗ ಚೆನ್ನಾಗಿ ಅರ್ಥವಾಗುತ್ತದೆ, ಇಲ್ಲದೇ ಹೋದರೆ ಮನಸ್ಸಿನಲ್ಲೇ ತುಂಬಾ ಡೋಲಾಯಮಾನವಾಗಿರುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಏಕೆಂದರೆ ನಾನು ಸ್ವತಃ ವಕೀಲನೂ ಅಲ್ಲ, ಕಾನ್‌ಸ್ಟಿಟ್ಯೂಯನ್ಸಿ ಪಂಡಿತನೂ ಅಲ್ಲ. ಕೇವಲ ವಿಷಯುಗಳನ್ನು ಹೇಳುವಷ್ಟು ಮಾತ್ರ ಕಲತಿದ್ದೇನೆ.

ಇನ್ನು ಪುಟ 19ರಲ್ಲಿ ಕ್ಲಾಜ್ 14ರಲ್ಲಿ ಈ ರೀತಿ ಹೇಳಿದೆ—'Possession of excisable articles in excess of the quantity prescribed.'

ಅದರಲ್ಲಿ 2 (ಬಿ) ನಲ್ಲಿ ಈರೀತಿ ಹೇಳಿದೆ—'a permit granted by the Deputy Commissioner in that behalf.'

ಆದರೆ ಎಕ್ಸೈಜು ಕಮಿಷನರಾದರೂ ಆಗಬಹುದು ಅವರೂ ಇಲ್ಲದಿದ್ದರೆ ನಮ್ಮ ಡೆಪ್ಯುಟಿ ಕಮಿಷನರಾದರೂ ಆಗಬಹುದು. ಬೇರೆ ಕಡೆ ಎಕ್ಸೈಜು ಕಮಿಷನರು ಇಲ್ಲದಿದ್ದಾಗ ನಮ್ಮ ಡೆಪ್ಯುಟಿ ಕಮಿಷನರೇ ಆಗಬಹುದು. ಸೆಕ್ಷನ್ (4)ರಲ್ಲಿ ನಮೂದಿಸಿರುವ ಪ್ರಕಾರ ಅವರು ಅಧಿಕಾರ ಚಲಾಯಿಸುತ್ತಾರೆ. ಅದರಿಂದ ಬಹಳ ಅನಾಹುತವಾಗುತ್ತದೆ. ಆದ್ದರಿಂದ ಈ ಕ್ಲಾಜನ್ನು ನಿರ್ಧಯವಾಗಿ ಕಿತ್ತು ಹಾಕಬೇಕು. ಏಕೆಂದರೆ ಎಲ್ಲ ಈ ರೀತಿ ಅಧಿಕಾರ ಕೊಟ್ಟರೋ ಅಲ್ಲ ಆ ಅಧಿಕಾರ ದುರುಪಯೋಗವಾಗಿದೆ. ಇದನ್ನು ಜನರಲೈಜ್ ಮಾಡಿ ಹಾಗೂ ಡಿ—ಜನರಲೈಜ್ ಮಾಡುವುದಕ್ಕೆ ಇವರಿಗೆ ಹಕ್ಕು ಇಲ್ಲ. ಏಕೆಂದರೆ ಇವೆಲ್ಲಾ ಕೈನುಡುವಂತಹ ವಸ್ತುಗಳು ಆದ್ದರಿಂದ ಈ ಮಸೂದೆಯಲ್ಲಿ ಬಹಳ ಸ್ಪಷ್ಟವಾದ ಅಭಿಪ್ರಾಯಗಳನ್ನು ಹೊಂದಿಸುವುದು ಬಹಳ ಅತ್ಯಗತ್ಯ. ಆದರೆ ನಾವು ಅಧಿಕಾರವನ್ನು ಅಧಿಕಾರಿಗಳಿಗೆ ಈ ಮಸೂದೆಯ ಮೂಲಕ ಕೊಡುವಾಗ ಮಾನ್ಯ ಸಚಿವರು ಹೆಚ್ಚು ಎಚ್ಚರಿಕೆಯಿಂದ ಇರಬೇಕು. ಸಾಮಾನ್ಯವಾಗಿ ಅಂತಹ ಲೂಪ್‌ಹೋಲ್ಸ್ ಎಲ್ಲ ಕ್ಲಾಜುಗಳಲ್ಲೂ ನುಸುಳಿಕೊಂಡಿದೆ. ಅವರು ಸಾವಧಾನವಾಗಿ ಎರಡೂ ಕ್ಲಾಜುಗಳನ್ನೂ ನೋಡಿದರೆ ಹೆಚ್ಚು ಕಡಿಮೆ ಪ್ರತಿಯೊಂದು ಕ್ಲಾಜಿನಲ್ಲೂ ಅಂತಹ ಒಂದೊಂದು ಲೂಪ್‌ಹೋಲ್ ಸೇರಿದೆ. ಜಾಯಿಂಟ್ ಸೆರೆಕ್ಟ್ ಕಮಿಟಿಯವರು ಅದನ್ನು ಚೆನ್ನಾಗಿ ನೋಡಿರಬೇಕು. ಆದರೆ ಇಲ್ಲನ ಕಾನೂನು ಪರಂಪರೆಯಲ್ಲಿ ಬೇರೆ ಹೊಸ ಕಾನೂನು ಇಲ್ಲದೇ ಇರುವುದರಿಂದ ಅವನ್ನು ಉಳಿಸಿಕೊಳ್ಳುವುದಕ್ಕೆ ಹೆಚ್ಚು ಪ್ರಯತ್ನ ನಡೆದಿದೆ. ಹರಾಜು ವಿಷಯದಲ್ಲಿಯೂ ಈ ಮಾತು ನಲ್ಲುತ್ತದೆ. ವರದಿಗಾರರೂ ಸಹ ಈ ಒಂದು ತಿದ್ದುಪಡಿಯನ್ನು ಸುಧಾರಣೆ ಎಂದು ಕರೆದಿದ್ದಾರೆ.

ಅಧ್ಯಕ್ಷರು.—ಕೇವಲ ಆ ತಪ್ಪು ತಮ್ಮದೇ ಎಂಬುದಾಗಿ ನನಗೆ ಕಾಣುತ್ತದೆ. ಈಗ ನೀವು ಹೇಳುವಂಥಾದ್ದನ್ನು ಈ ಮಸೂದೆಯ ಬಗ್ಗೆ ಪ್ರಥಮತಃ ಚರ್ಚೆಮಾಡುವಾಗ ಸೂಚಿಸಲಲ್ಲ, ಈಗ ಕಮಿಟಿಯವರು ಆರೋಚನೆಮಾಡಿರಬೇಕಾಗಿತ್ತು, ಎಂದು ಹೇಳುತ್ತೀರಿ, ನೀವು ಮೊದಲೇ ತಿಳುವಳಿಕೆ ಕೊಟ್ಟಿಲ್ಲ, ಅದರಮೇರೆ ಈಗ ಚರ್ಚೆ ಮಾಡುತ್ತಿದ್ದೀರಿ.

ಶ್ರೀ ಎಸ್. ಗೋಪಾಲ ಗೌಡ.—ಆ ಒಂದು ವಿಷಯವನ್ನು ಈ ಸಂದರ್ಭದಲ್ಲಾದರೂ ಹೇಳಿಕೊಂಡರೆ ಮುಂದಾದರೂ ಈ ಸರ್ಕಾರದವರು ಇದನ್ನು ಅಳವಡಿಸಿಕೊಳ್ಳಬಹುದೆಂದು ನಾನು ತಮಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದ್ದೆಲ್ಲಾ ಸರಿ, ಆದರೆ ಸಮಯ ತಪ್ಪು. ಈ ವಿಧೇಯಕ ಚರ್ಚೆಯಾಗುವ ಸಂದರ್ಭದಲ್ಲಿ ಹೇಳುವುದು ಬಿಟ್ಟು ಈಗ ಹೇಳುವುದು ಅನುಚಿತ ವೆಂದು ಹೇಳಬಹುದು.

ಶ್ರೀ ಎಸ್. ಗೋಪಾಲ ಗೌಡ.—ಇದರಲ್ಲಿ ದೊಡ್ಡ ಕಂಟ್ರಾಕ್ಟುದಾರನು ಯಾರು ಇದ್ದಾನೋ ಅವನು ಸಬ್‌ಲೀಜ್ ಮಾಡಿದರೆ ಅಂತಹವನನ್ನೂ ಕೂಡ ಇವರು ರೆಕಗ್‌ನೈಜ್ ಮಾಡುತ್ತೇವೆಂಬುದಾಗಿ ಇದರಲ್ಲಿ ಹೇಳಿದ್ದಾರೆ. ದೊಡ್ಡವರ ಹೆಸರಿನಲ್ಲಿ ಈ ರೀತಿ ಅಂಗಡಿಗಳು ನಡೆಯುತ್ತವೆ. ಆ ಸಮಿತಿಯವರೂ ಕೂಡ ಸಬ್‌ಲೀಜನ್ನು ಹೆಚ್ಚು ಕಡಿಮೆ ರೆಕಗ್‌ನೈಜ್‌ಮಾಡಿ ಅಂತಹವನ್ನು ನಮ್ಮ ಹಿಡಿತದಲ್ಲಿಟ್ಟುಕೊಳ್ಳೋಣವೆಂದು ಹೇಳುತ್ತಾರೆ. ಇದು ಸುಧಾರಣೆಯೋ ಅಥವಾ ಇದು ರೈಸನ್ಸ್ ಕೊಡುವ ಮೂಲ ಉದ್ದೇಶಕ್ಕೆ ಧಕ್ಕೆ ತರತಕ್ಕಂಥಾದ್ದೋ ಎಂಬ ವಿಷಯವಾಗಿ ನಾವು ಸಾವಧಾನವಾಗಿ ವಿಚಾರ

ಮಾಡಬೇಕು. ದೊಡ್ಡ ಅಂಗಡಿಯವರೇ ಪರೋಕ್ಷವಾಗಿ ಇದನ್ನು ಒಪ್ಪಿದ್ದಾರೆ. ಸಬ್‌ಲೀಜ್ ಮಾಡಿಕೊಂಡು ಅಂಗಡಿ ನಡೆಸುವವರು ಅಂತಹವರನ್ನು ಹಿಡಿಯುವುದಾದರೆ ಹೇಗೆ ಆಗುತ್ತದೆ. ಅಂತಹವರನ್ನು ನಮ್ಮ ವ್ಯಾಪಾರಿ ಎಂದು ಸಬ್‌ಲೀಜನ್ನು ಅಸ್ತು ಎಂದು ಅದನ್ನು ಒಪ್ಪಿಕೊಳ್ಳುವುದು ಹೇಗೆ ಆಗುತ್ತದೆ ? ಅದನ್ನು ಸರ್ಕಾರದವರು ದೇಶದ ಹಿತದೃಷ್ಟಿಯಿಂದ ಸ್ವಲ್ಪ ಸಾವಧಾನವಾಗಿ ವಿಚಾರ ಮಾಡಬೇಕು.

ಇನ್ನು ಟಾಡಿ ವಿಷಯದಲ್ಲಿ ಕೆಲವು ಔದಾರ್ಯವನ್ನು ಸರ್ಕಾರದವರು ತೋರಿಸಿದ್ದಾರೆ. ಅದರ ಬಗ್ಗೆ ಇನ್ನಾದರೂ ಮುಂದೆ ಹೋಗಿ ಎಲ್ಲಾ ಕಡೆ ನೀರಾ ತಾಡಿ ಅಭಿಪ್ರಾಯ ಹೊಂದಿದ್ದಾರೋ ಏನೋ ಗೊತ್ತಿಲ್ಲ. ಆ ಬಗ್ಗೆ ಸೂಚನೆ ಕಂಡುಬರುತ್ತಿಲ್ಲ. ಆ ಬಗ್ಗೆ ಔದಾರ್ಯ ಮಾತುಕತೆಯಲ್ಲಿ ತೋರಿಸಿದಾರೆ. ಈ ಶಾಸನದಿಂದ ಟಾಡಿಯನ್ನು ಹೊರಪಡಿಸಿದ್ದಾರೆ. Under Clause 18, "the ... e Government may declare that the written permission of the lessee to draw toddy shall have the same force and effect as a license under section 13" ಎಂದು ಇದೆ. ಬರವಣಿಗೆಯಲ್ಲಿ ಮಾತ್ರ ಕೊಟ್ಟರೆ ಸಾಕು ಎಂದು ಇದರಲ್ಲಿ ಕೊಟ್ಟಿದೆ. ಪ್ರಾಯೋಗಿಕವಾಗಿ ಅದು ನೀರಾ ಮತ್ತು ಟಾಡಿ ಪ್ರದೇಶಗಳಲ್ಲಿರುವ ಅನುಭವದಿಂದ ಕೊಟ್ಟಿರಬಹುದು ಎಂದು ನಾನು ಹೇಳುತ್ತೇನೆ. ಒಂದು ವೇಳೆ ಲೈಸೆನ್ಸುದಾರರು ಅಲ್ಲಿ ಇಲ್ಲದಿದ್ದರೆ ಮರ ಕೊಯ್ಯುವವರ ಬರವಣಿಗೆಯ ದೃಷ್ಟಿಯಿಂದ ಮಾಡಿದರೋ ಏನೋ ಗೊತ್ತಿಲ್ಲ. ಇಲ್ಲೂ ಕೂಡ ಬಹಳಮಟ್ಟಿಗೆ ಈ ಕಾನೂನು ಉಲ್ಲಂಘನೆ ಆಗುವುದಕ್ಕೆ ಅವಕಾಶ ಕೊಡುತ್ತಿದ್ದಾರೆಂಬುದಾಗಿ ನಾನು ಸೂಚಿಸಬಯಸುತ್ತೇನೆ.

